ಬಂದಿದ್ದ. ಒಂದು ದಿನ ಮಾತಿನ ನಡುವೆ ತನ್ನ ಮದುವೆಯ ವಿಷಯ ಎದ್ದಾಗ ಅವನು ತನ್ನ ಮನಸ್ಸಿನಲ್ಲಿ ಕಾಪಿಟ್ಟ ಬಯಕೆಯನ್ನು ಹೆತ್ತವರಿಗೆ ತಿಳಿಸಿದ.

'ಅವಳು ಮಂತ್ರವಾದಿಯ ಮಗಳು. ಅವಳನ್ನೇ ನೀನು ಮದುವೆಯಾಗುವುದು? ನಿನಗೇನು ಹುಚ್ಚೋ ಹಿಡಿದಿದೆಯಾ?'

ಅವರು ಹಳೆಯ ಕತೆಗಳನ್ನು ಪುನಃ ವಿವರಿಸತೊಡಗಿದರು.

ಎಷ್ಟೋ ವರ್ಷಗಳಿಂದ ಮಂತ್ರವಾದವನ್ನು ಪ್ರಯೋಗಿಸುತ್ತಾ ಬಂದಿದ್ದ. ಆ ಕುಟುಂಬದಲ್ಲಿ ಒಂದಕ್ಕಿಂತಲು ಹೆಚ್ಚಿನ ಹೆಣ್ಣುಮಕ್ಕಳು ಇರುವುದಿಲ್ಲವೆಂದೂ, ಅಲ್ಲಿಂದ ಯಾವುದಾದರು ಹೆಣ್ಣನ್ನು ಮದುವೆಯಾದರೆ ಯಾವುದೇ ಕಾಯಿಲೆ ಖಸಾಲೆ ಇಲ್ಲದೆ ಗಂಡ ಇದ್ದಕ್ಕಿದ್ದಂತೆ ಸತ್ತು ಹೋಗುತ್ತಾರೆಂದು ಅವರು ಹೇಳಿದರು.

'ಸತ್ತವರನ್ನು ಉಯಿಲು ಬರೆಯುವುದಕ್ಕೋಸ್ಕರ ಮಾತ್ರ ಒಂದರೆಡು ಗಂಟೆಗಳ ಕಾಲ ಬದುಕಿಸಲು ಅವನಿಗೆ ಸಾಧ್ಯವೆಂದು ಕೇಳಿದ್ದಿದೆ.'

ಅಮ್ಮ ಹೇಳಿದಳು. ಅದರ ನಂತರ ಆತ ಹಲವರ ಮನೆಯಿಂದ ಮಂತ್ರವಾದಿಯ ಕುರಿತಾದ ಕತೆಗಳನ್ನು ಕೇಳಿಸಿಕೊಂಡ. ಮಂತ್ರವಾದಿಯ ಮನೆಯಲ್ಲಿ ಅಂಗಳ ಗುಡಿಸುವ ಕೆಲಸದ ಮುದುಕಿ ಒಮ್ಮೆ ತೋಟದಲ್ಲಿ ಬಿಳಿಚಿಕೊಂಡ ತೆಳ್ಳನೆಯ ಒಬ್ಬ ಹೆಂಗಸನ್ನು ಕಂಡಿದ್ದು, ಅನಂತರ ಒಮ್ಮೆಯೂ ಅವಳನ್ನು ಕಾಣದೇ ಇದ್ದಿದ್ದು ಹಾಗೂ ಮತ್ತೊಂದು ದಿನ ಕೋಣೆಯೊಂದರಿಂದ ಎಳೆಮಗುವಿನ ಅಳುವಿನ ಧ್ವನಿ ಕೇಳಿದ್ದು... ಹೀಗೆ ಹಲವಾರು ಕತೆಗಳು. ಇದ್ಯಾವುದೂ ಅಚ್ಚರಿ ಹುಟ್ಟಿಸುವ ಸಂಗತಿಗಳಲ್ಲ. ಮಂತ್ರವಾದಿಗೆ ಏಕೆ ಹೆಂಡತಿ ಇರಬಾರದು? ಹೆಂಡತಿ ಹೆರಿಗೆಯಲ್ಲಿ ಸತ್ತುಹೋಗಿರಬಾರದು? ಅಮ್ಮನಿಲ್ಲದ ಆ ಮಗು ಸಂಜೆಗೆ ಏಕೆ ಅಳಬಾರದು? ಆದರೆ ಆ ಎಲ್ಲಾ ಕತೆಗಳ ಹಿಂದೆ ಮನೆ ಮಾಲೀಕನ ಕೆಟ್ಟ ಹೆಸರಿನ ಕರಿನೆರಳು ಬಿದ್ದಿತ್ತು. ಮಂತ್ರವಾದಿಯ ಕೊಟ್ಟಿಗೆಯಲ್ಲಿದ್ದ ಕಪ್ಪು ಹಸುಗಳು, ಅವನ ತೋಟದಲ್ಲಿ ಓಡಾಡುವ ಕಪ್ಪು ನಾಯಿ ಎಲ್ಲಾ ಶಪಿಸಲ್ಪಟ್ಟ ಮನುಷ್ಯರೆಂದು ಕೆಲವರು ಹೇಳಿದರು. ಸಂಜೆಯ ನಂತರ ಒಂದು ಕೋಲು ಕೈಗೆತ್ತಿಕೊಂಡು, ನೆತ್ತಿಯ ಮೇಲೆ ಹೊತ್ತಿ ಹೊಳೆಯುತ್ತಿರುವ ಒಂದು ಕೆಂಪು ತಿಲಕ ಹಚ್ಚಿ ಮಂತ್ರವಾದಿ ನಡೆಯಲು ಹೊರಟಾಗ ದಾರಿಯಲ್ಲಿ ಒಬ್ಬರಾದರೂ ಅವನಿಗೆ ಎದುರಾಗಿ ನಡೆಯುವುದಿಲ್ಲ.

ಎಲ್ಲಾ ಕೇಳಿಸಿಕೊಂಡಿದ್ದಾಯಿತು. ಆದರೆ ಯಾವುದನ್ನೂ ನಂಬಲಿಲ್ಲ. ನಮ್ಮ ಕಥಾನಾಯಕನಾದ ಡಾಕ್ಟರ್ ಒಂದು ದಿನ ಆ ಮನೆಗೆ ಹೋಗಿ, ಮಂತ್ರವಾದಿಯನ್ನು ಭೇಟಿಯಾಗಲು ಕೋರಿದ. 'ಯಾರದು?' ಮೇಲಿನಿಂದ ಮಂತ್ರವಾದಿ ಕೇಳಿದ. ಬಾಗಿಲು ತೆರೆದುಕೊಟ್ಟು ದೂತ ಮೈಬಗ್ಗಿಸಿದ.

'ನಾನೇ... ಮುನ್ಸಿಯ ಮಗ, ಚಂದ್ರ.'

ಏಣಿ ಮೆಟ್ಟಿಲುಗಳನ್ನು ಇಳಿಯುತ್ತಾ ಮಂತ್ರವಾದಿ ಕೇಳಿದ–

'ಏನು ವಿಷಯ?'

'ನನಗೆ ನಿಮ್ಮ ಮಗಳನ್ನು ಮದುವೆಯಾಗಬೇಕು. ಅದಕ್ಕೆ ನಿಮ್ಮ ಸಮ್ಮತಿ ಕೇಳಲು ನಾನೀಗ ಬಂದಿದ್ದು.'

ಮಂತ್ರವಾದಿ ಗಟ್ಟಿಯಾಗಿ ನಕ್ಕ. ಅನಂತರ ತನ್ನ ಕೆಲಸದವರಿಗೆ ಅವನನ್ನು ಹೊರ ಹಾಕಿ ಬಾಗಿಲನ್ನು ಮುಚ್ಚಿ ಬೀಗಹಾಕಲು ಹೇಳಿದ.